Teachingninja.in

Latest Govt Job updates

Private Job updates

Free Mock tests available

Visit - teachingninja.in

# KHC Dist. Judge

## Previous Year Paper Mains (Criminal Law) 17 Sept, 2017

Teachingninja.in

**HIGH COURT OF KARNATAKA**
ಕರ್ನಾಟಕ ಉಚ್ಚ ನ್ಯಾಯಾಲಯ

**MAIN EXAMINATION FOR RECRUITMENT TO THE POSTS OF DISTRICT JUDGES**
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳ ನೇಮಕಾತಿಯ ಮುಖ್ಯ ಪರೀಕ್ಷೆ

# CRIMINAL LAW
ಅಪರಾಧ ಕಾನೂನು

**QUESTION PAPER**
ಪ್ರಶ್ನೆ ಪತ್ರಿಕೆ

**Date: 17.09.2017** — **Max. Marks: 150**
ದಿನಾಂಕ: 17ನೇ ಸೆಪ್ಟೆಂಬರ್ 2017 — ಗರಿಷ್ಠ ಅಂಕಗಳು: 150

**TIME: 2.30 pm to 5.30 pm**
ಸಮಯ: ಮಧ್ಯಾಹ್ನ 2.30 ರಿಂದ 5.30 ಘಂಟೆ

**INSTRUCTIONS TO CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು

1) ***It is compulsory for all the candidates to answer at least one of the papers in English and insofar as the other paper is concerned, it shall be optional for the candidates to answer the same either in English or in Kannada.***

*ಅಭ್ಯರ್ಥಿಗಳು ಖಡ್ಡಾಯವಾಗಿ ಒಂದು ಪ್ರಶ್ನೆ ಪತ್ರಿಕೆಯನ್ನು ಆಂಗ್ಲಭಾಷೆಯಲ್ಲಿ ಉತ್ತರಿಸಬೇಕು. ಉಳಿದ ಪ್ರಶ್ನೆ ಪತ್ರಿಕೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.*

2) ***If there is any difference in the question in English language and Kannada language, the question framed in English language shall prevail.***

*ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.*

3) ***All questions are compulsory***

*ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿದೆ*

**1. Write a judgment on the following facts after mentioning bare necessary facts and presuming that necessary witnesses have been examined by the prosecution.** **30**

Suresh, the deceased was married to Geetha, the sister of Ganesh. Ganesh and his father Ramanna were living in a Railway quarter at Shankarpura. Suresh's sister was married to one Prasad, who was



Teachingninja.in

also living in another Railway quarter nearby. Suresh had been living for sometime with his father-in-law. They did not, however, pull on well together and Suresh shifted to the house of Prasad. Suresh's wife, Geetha, had continued to live with her father as she was unwilling to go with Suresh. Her father Ramanna and brother Ganesh sided with her and refused to let her go with Suresh. Suresh also suspected that she had been carrying on with one Sachin who used to visit Ramanna's quarter. Consequently, Suresh was keen to take away his wife, the more so as he had got a job in the local department some months before and wanted to live an independent life.

On 21st June 2014, there was some quarrel between Ganesh and Suresh about Geetha; but nothing untoward happened then and Ganesh went back to his quarter and Suresh went away to Prasad's quarter. Suresh asked Prasad's two sons to help him in bringing back his wife. Prasad also arrived and then all four of them went to Ramanna's quarter to bring back the girl at about 10.00 p.m. on 21st June 2014. On reaching the place, Prasad and his two sons stood outside while Suresh went in. In the meantime, Ramanna came out and was asked by Prasad to let Geetha go with her husband. Ramanna was not agreeable to it and asked Prasad not to interfere in other people's affairs. While Ramanna and Prasad were talking, Suresh came out of the quarter dragging his reluctant wife behind him. Geetha caught hold of the door as she was being taken out and a tug-of-war followed between her and Suresh. Ganesh was also there and shouted to his father that Suresh was adamant. Ramanna, thereupon replied that if Suresh was adamant he should be beaten. On this Ganesh took out a knife from his pocket and stabbed Suresh once. The knife penetrated into the heart and Suresh fell down senseless. Steps were taken to revive Suresh but without success. Thereupon, Suresh was taken to the hospital by Ramanna, Ganesh, Prasad and his two sons and some others, but Suresh died by the time they reached the hospital.

After completion of investigation, on the complaint lodged by Prasad, Ganesh and Ramanna were prosecuted for having committed murder of Suresh.



Teachingninja.in

ಮೃತ ಸುರೇಶ ಗಣೇಶನ ಸಹೋದರಿಯಾದ ಗೀತಾಳನ್ನು ಮದುವೆಯಾಗಿದ್ದನು. ಗಣೇಶ ಮತ್ತು ಆತನ ತಂದೆ ರಾಮಣ್ಣ ಶಂಕರಪುರ ರೈಲ್ವೆ ಕ್ವಾಟ್ರಸ್‌ನಲ್ಲಿ ವಾಸಿಸುತ್ತಿದ್ದರು. ಸುರೇಶನ ಸಹೋದರಿ ಒಬ್ಬ ಪ್ರಸಾದ್‌ನನ್ನು ಮದುವೆಯಾಗಿ ಹತ್ತಿರದ ಇನ್ನೊಂದು ರೈಲ್ವೆ ಕ್ವಾಟ್ರಸ್‌ನಲ್ಲಿ ವಾಸಿಸುತ್ತಿದ್ದರು. ಸುರೇಶನು ಕೆಲವು ಸಮಯ ತನ್ನ ಮಾವನ ಜೊತೆಗೆ ವಾಸವಾಗಿದ್ದನು. ಅವರೊಳಗೆ ಪರಸ್ಪರ ಹೊಂದಾಣಿಕೆ ಆಗಿಲ್ಲ ಮತ್ತು ಸುರೇಶನು ಪ್ರಸಾದ್‌ನ ಮನೆಗೆ ಸ್ಥಳಾಂತರಗೊಳ್ಳುತ್ತಾನೆ. ಸುರೇಶನ ಹೆಂಡತಿ ಗೀತ ತನ್ನ ತಂದೆ ಜೊತೆಗೆ ವಾಸ ಮಾಡಲು ನಿರ್ಧರಿಸಿ ಸುರೇಶನ ಜೊತೆಗೆ ಹೋಗಲು ಒಪ್ಪಲಿಲ್ಲ. ತಂದೆ ರಾಮಣ್ಣ ಮತ್ತು ಸಹೋದರ ಗಣೇಶ ಆಕೆಯ ಪರವಾಗಿ ಇದ್ದರು ಮತ್ತು ಸುರೇಶನ ಜೊತೆಗೆ ಆಕೆ ಹೋಗಲು ನಿರಾಕರಿಸುತ್ತಿದ್ದರು. ರಾಮಣ್ಣನ ಕ್ವಾಟ್ರಸ್ಸಿಗೆ ಬೇಟಿ ನೀಡುತ್ತಿದ್ದ ಸಚಿನ್ ಜೊತೆಗೆ ಆಕೆ ಪ್ರಣಯ ವಿಲಾಸ ನಡೆಸುತ್ತಿದ್ದಾಳೆಂದು ಸುರೇಶ ಸಂಶಯ ಪಟ್ಟನು. ಸುರೇಶನಿಗೆ ಸ್ಥಳೀಯ ಇಲಾಖೆಯಲ್ಲಿ ಕೆಲವು ತಿಂಗಳ ಹಿಂದೆ ಕೆಲಸ ಸಿಕ್ಕಿದ್ದು ಸ್ವತಂತ್ರವಾಗಿ ಜೀವಿಸಲು ಇಚ್ಛಿಸಿ ಈ ಕಾರಣದಿಂದ ಸುರೇಶ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಲು ತೀಕ್ಷ್ಣವಾಗಿ ಯೋಚಿಸುತ್ತಾನೆ.

21ನೇ ಜೂನ್ 2014ರಂದು ಗೀತಾಳ ಬಗ್ಗೆ ಸುರೇಶ ಮತ್ತು ಗಣೇಶನ ನಡುವೆ ಜಗಳವಾಗುತ್ತದೆ. ಆದರೆ ಅಹಿತಕರ ಘಟನೆ ನಡೆದಿಲ್ಲ ಮತ್ತು ಗಣೇಶ ಕ್ವಾಟ್ರಸ್ಸಿಗೆ ವಾಪಸ್ಸು ಹೋಗುತ್ತಾನೆ ಮತ್ತು ಸುರೇಶನು ಪ್ರಸಾದ್‌ನ ಕ್ವಾಟ್ರಸ್ಸಿಗೆ ವಾಪಸ್ಸು ಹೋಗುತ್ತಾನೆ. ಸುರೇಶ ತನ್ನ ಹೆಂಡತಿಯನ್ನು ವಾಪಸ್ಸು ಕರೆತರಲು ಪ್ರಸಾದ್‌ನ ಇಬ್ಬರು ಗಂಡು ಮಕ್ಕಳ ಸಹಾಯ ಕೇಳುತ್ತಾನೆ. ಪ್ರಸಾದ್ ಕೂಡ ಬಂದನು ಮತ್ತು ಎಲ್ಲಾ ನಾಲ್ಕು ಜನ ಸೇರಿ ರಾಮಣ್ಣನ ಕ್ವಾಟ್ರಸ್ಸಿಗೆ ಹುಡುಗಿಯನ್ನು ಕರೆತರಲು 21ನೇ ಜೂನ್ 2014 ರಂದು ಸುಮಾರು ರಾತ್ರಿ ಹತ್ತು ಗಂಟೆಗೆ ಹೋಗುತ್ತಾರೆ. ಆ ಸ್ಥಳವನ್ನು ತಲುಪಿದ ನಂತರ ಪ್ರಸಾದ್ ಮತ್ತು ಆತನ ಇಬ್ಬರು ಗಂಡು ಮಕ್ಕಳು ಹೊರಗೆ ನಿಲ್ಲುತ್ತಾರೆ, ಸುರೇಶ ಒಳಗೆ ಹೋಗುತ್ತಾನೆ. ಆ ಹೊತ್ತಿಗೆ ರಾಮಣ್ಣ ಹೊರಗೆ ಬರುತ್ತಾರೆ ಮತ್ತು ಗೀತಳು ಗಂಡನ ಜೊತೆ ಹೋಗಲು ಪ್ರಸಾದ್ ಕೇಳಿಕೊಳ್ಳುತ್ತಾನೆ. ಇದಕ್ಕೆ ರಾಮಣ್ಣನು ಒಪ್ಪಿಗೆ ನೀಡಲಿಲ್ಲ ಮತ್ತು ಬೇರೆಯವರ ವ್ಯವಹಾರದಲ್ಲಿ ಮಧ್ಯೆ ಪ್ರವೇಶಿಸದಂತೆ ಪ್ರಸಾದ್‌ನಿಗೆ ಹೇಳುತ್ತಾನೆ. ರಾಮಣ್ಣ ಮತ್ತು ಪ್ರಸಾದ್ ಮಾತನಾಡುತ್ತಿರಬೇಕಾದರೆ ಸುರೇಶ ಒಪ್ಪಿಗೆ ಇಲ್ಲದ ಹೆಂಡತಿಯನ್ನು ಎಳೆದುಕೊಂಡು ಕ್ವಾಟ್ರಸ್‌ನ ಹೊರಗಡೆ ಬರುತ್ತಾನೆ. ಗೀತ ತನ್ನನ್ನು ಹೊರಗಡೆ ಕರೆದುಕೊಂಡು ಹೋಗಬಾರದೆಂದು ಬಾಗಿಲನ್ನು ಹಿಡಿದುಕೊಳ್ಳುತ್ತಾಳೆ. ಆಗ ಅವಳು ಮತ್ತು ಸುರೇಶನ ನಡುವೆ ಪರಸ್ಪರ ಜಗಳವಾಗುತ್ತದೆ. ಗಣೇಶನು ಅಲ್ಲಿದ್ದನು ಮತ್ತು ಸುರೇಶ ಅಚಲನಾಗಿದ್ದಾನೆಂದು ತಂದೆಗೆ ಕಿರುಚುತ್ತಾನೆ. ಸುರೇಶ ಅಚಲನಾಗಿದ್ದರೆ ಅವನಿಗೆ ಹೊಡೆಯಬೇಕು ಎಂದು ರಾಮಣ್ಣ ಉತ್ತರಿಸುತ್ತಾನೆ. ಆಗ ಗಣೇಶ ತನ್ನ ಜೇಬಿನಿಂದ ಚಾಕು ತೆಗೆದು ಸುರೇಶನಿಗೆ ಇರಿಯುತ್ತಾನೆ, ಚಾಕು ಅವನ ಹೃದಯದ ಒಳಹೊಕ್ಕುತ್ತದೆ ಮತ್ತು ಸುರೇಶ ಪ್ರಜ್ಞಾಶೂನ್ಯನಾಗಿ ಬೀಳುತ್ತಾನೆ. ಅವನನ್ನು ಉಳಿಸಲು ಯಾವ ಕ್ರಮ ತೆಗೆದುಕೊಂಡರೂ ಯಶಸ್ವಿಯಾಗಲಿಲ್ಲ. ನಂತರ ಸುರೇಶನನ್ನು ರಾಮಣ್ಣ, ಗಣೇಶ, ಪ್ರಸಾದ್ ಮತ್ತು ಅವನ ಇಬ್ಬರು ಗಂಡು ಮಕ್ಕಳು ಮತ್ತು ಇತರರು ಆಸ್ಪತ್ರೆಗೆ ಕರೆದೊಯ್ಯುತ್ತಾರೆ. ಆಸ್ಪತ್ರೆಗೆ ತಲುಪುವಷ್ಟರಲ್ಲಿ ಸುರೇಶ ಮೃತಪಡುತ್ತಾನೆ.

ಪ್ರಸಾದ್ ಸಲ್ಲಿಸಿದ ದೂರಿನ ಮೇರೆಗೆ ತನಿಖೆ ಮುಗಿದ ನಂತರ ಗಣೇಶ ಮತ್ತು ರಾಮಣ್ಣರು ಸುರೇಶನನ್ನು ಕೊಲೆ ಮಾಡಿದ್ದಾರೆಂದು ಅಭಿಯೋಜಿಸುತ್ತಾರೆ.

**2. <u>Translate the following passage from English to Kannada</u>:** **15**

The prosecution case, in brief, is that on 14.4.2005 on receipt of a telephonic message from the Incharge, Police Post, General Hospital, Bhiwani regarding admission of Meena Devi wife of Manoj



Teachingninja.in

Kumar (appellant no.1) resident of Village Hetampura in burnt condition, ASI Chattarmal (PW-11) of P.S. Sadar, Bhiwani along with other police officials reached the said hospital and collected medical ruqa (memo) alongwith medico-legal report of injured Meena. After obtaining the opinion of the Doctor regarding fitness of the injured to make statement when he brought the Duty Magistrate to record her statement in the hospital, the Doctor had already referred her to PGIMS Rohtak. Thereafter, he alongwith Magistrate reached PGIMS, Rohtak and collected two medical ruqas from Incharge, Police Post, PGIMS Rohtak out of which one was regarding death of Meena. Then he reached in the gallery of emergency ward where complainant Vedpal (PW-9) met him and got recorded his statement (Ex.PA).

## 3. Translate the following passage from Kannada to English **15**

ಅರ್ಜಿದಾರನ ಮಗ ಯಶವೀರ್ ಸಿಂಗ್ ಎಂಬುವನ ಕೊಲೆ ಪ್ರಕರಣವನ್ನು ಕೇಂದ್ರ ತನಿಖಾ ಘಟಕ (ಸಂಕ್ಷಿಪ್ತವಾಗಿ ಸಿಬಿಐ) ದಿಂದ ತನಿಖೆ ನಡೆಸುವಂತೆ ನಿರ್ದೇಶನ ನೀಡಲು ಕೋರಿ ಭಾರತ ಸಂವಿಧಾನ 1950 (ಸಂಕ್ಷಿಪ್ತವಾಗಿ 'ಸಂವಿಧಾನ') ರ ಅನುಚ್ಛೇದ 32 ರ ಮೇರೆಗೆ ಈ ಅರ್ಜಿಯನ್ನು ಸಲ್ಲಿಸಲಾಗಿದೆ. ಸದರಿ ಯಶ್‌ವೀರ್ ಸಿಂಗ್‌ನನ್ನು ಕೊಲೆ ಮಾಡಲಾಗಿದೆ ಮತ್ತು ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದು ಪೊಲೀಸರು ಪ್ರಥಮ ಮಾಹಿತಿ ವರದಿ (ಸಂಕ್ಷಿಪ್ತವಾಗಿ 'ಪ್ರ.ಮಾ.ವ') ಸಲ್ಲಿಸಿದ್ದರೂ ಕೂಡ ಕೆಲವು ಪ್ರಭಾವೀ ವ್ಯಕ್ತಿಗಳ ಒತ್ತಡದಿಂದಾಗಿ ಪೊಲೀಸರು ಆ ಬಗ್ಗೆ ಯಾವುದೇ ಸಕಾರಾತ್ಮಕ ಕ್ರಮ ಕೈಗೊಂಡಿಲ್ಲ, ಬದಲಾಗಿ ಅರ್ಜಿದಾರನಿಗೆ ತೊಂದರೆ ನೀಡಲಾಗಿದ್ದು ಕೆಲವು ವ್ಯಕ್ತಿಗಳು ಬೆದರಿಕೆ ಹಾಕಿರುತ್ತಾರೆ. ಅರ್ಜಿಯಿಂದ ತಿಳಿದು ಬರುವುದೇನೆಂದರೆ ಸದರಿ ಯಶ್‌ವೀರ್ ಸಿಂಗ್‌ನನ್ನು ಉತ್ತರ ಪ್ರದೇಶದ ಗೋರಖ್‌ಪುರದ ಹೆಚ್ಚುವರಿ ಆಯುಕ್ತರು ಆಗಿ ನೇಮಕ ಮಾಡಲಾಗಿತ್ತು ಹಾಗೂ ಈತ 19 ನೇ ಜನವರಿ 2006 ರಂದು ತನ್ನ ಅಧಿಕೃತ ನಿವಾಸದಲ್ಲಿ ಮೃತಪಟ್ಟಿರುವುದು ತಿಳಿದುಬಂದಿದೆ. ಪೊಲೀಸ್ ಅಧಿಕಾರಿಗಳು ಮೃತ ಯಶ್‌ವೀರ್ ಸಿಂಗ್‌ನ ಸಂಬಂಧಿಕರೊಂದಿಗೆ ಅದರಲ್ಲೂ ಆತನ ಅತ್ತೆ ಮಾವನೊಂದಿಗೆ ಶಾಮೀಲಾಗಿ ಇದೊಂದು ಆತ್ಮಹತ್ಯೆ ಪ್ರಕರಣ ಎಂಬುದಾಗಿ ಸೂಚಿಸುತ್ತಿದ್ದಾರೆ ಎಂಬುದು ಅರ್ಜಿದಾರನ ದೂರು ಆಗಿರುತ್ತದೆ. ಅರ್ಜಿದಾರನು ವಿವಿಧ ಅಧಿಕಾರಿಗಳ ಬಳಿ ಮನವಿ ಮಾಡಿಕೊಂಡಿದ್ದಾನೆ. ಆದರೆ ಯಾವುದೇ ಪ್ರತಿಫಲ ದೊರೆತಿಲ್ಲ ಎಂದು ಹೇಳಲಾಗಿದೆ. ಅರ್ಜಿದಾರನು ಮಾಡಿರುವ ಆರೋಪಗಳ ಹಿನ್ನೆಲೆಯಲ್ಲಿ ವಿಷಯವನ್ನು ವಿಚಾರಣೆ ಮಾಡುವಂತೆ ಸಂಬಂಧಪಟ್ಟ ಪೊಲೀಸ್ ಠಾಣೆ ಮೇಲ್ವಿಚಾರಣಾ ಅಧಿಕಾರಿಗೆ ಸೂಪರಿಟೆಂಡ್‌ಂಟ್ ಆಫ್ ಪೊಲೀಸ್‌ರವರು ನಿರ್ದೇಶನ ನೀಡಿದ್ದರು ಎಂಬುದು ತಿಳಿದುಬಂದಿದೆ. ಆದರೆ ಮೃತನಿಗೆ ವಿರೋಧಿಗಳಾಗಿದ್ದು ಈತನಿಗೆ ಸಂಬಂಧಿಯಾಗಿದ್ದ ಕೆಲವು ಪ್ರಭಾವಿ ವ್ಯಕ್ತಿಗಳ ಒತ್ತಡದಿಂದಾಗಿ ಉದ್ದೇಶಪೂರ್ವಕವಾಗಿ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಎಂಬುದು ಅರ್ಜಿದಾರನ ದೂರು ಆಗಿರುತ್ತದೆ. ಒಟ್ಟಾರೆಯಾಗಿ ಅರ್ಜಿದಾರನು ಸಲ್ಲಿಸಿದ ಪ್ರಥಮ ಮಾಹಿತಿ ವರದಿಯ ಮೇಲೆ ಯಾವುದೇ ಕ್ರಮವನ್ನು ಜರುಗಿಸಿಲ್ಲ ಎಂಬ ಬಗ್ಗೆ ಆತನಿಗೆ ಅಸಮಾಧಾನವಾಗಿದೆ.



Teachingninja.in

4. Explain the considerations for grant of bail in non-bailable offences. How regular bail differs from anticipatory bail? **10**

ಜಾಮೀನುರಹಿತ ಪ್ರಕರಣಗಳಲ್ಲಿ ನೀಡುವ ಜಾಮೀನಿನ ಪರಿಗಣನೆಯನ್ನು ವಿವರಿಸಿ. ನಿರೀಕ್ಷಣಾ ಜಾಮೀನಿಗಿಂತ ನಿಯತ ಜಾಮೀನು ಹೇಗೆ ಭಿನ್ನವಾಗಿರುತ್ತದೆ.

5. Discuss the law relating to Dying Declaration and its evidentiary value. **10**

ಮರಣ ಕಾಲದ ಹೇಳಿಕೆಗೆ ಸಂಬಂಧಿಸಿದ ಕಾನೂನು ಮತ್ತು ಅದರ ಸಾಕ್ಷ್ಯದಾರ ಮೌಲ್ಯದ ಬಗ್ಗೆ ಚರ್ಚಿಸಿ.

6. Explain the procedure for conducting trial before a court of session. **10**

ಸೆಷನ್ಸ್ ನ್ಯಾಯಾಲಯದ ಮುಂದೆ ನಡೆಸುವ ವಿಚಾರಣೆಯ ಪ್ರಕ್ರಿಯೆಯನ್ನು ವಿವರಿಸಿ.

7. Define rape. Discuss its ingredients. **10**

ಬಲಾತ್ ಸಂಭೋಗವನ್ನು ವ್ಯಾಖ್ಯಾನಿಸಿ. ಅದರ ಘಟಕಾಂಶಗಳನ್ನು ಚರ್ಚಿಸಿ.

8. "No person shall neglect or refuse to maintain his wife, children and Parents". Discuss. **10**

"ಯಾವನೇ ವ್ಯಕ್ತಿಯು ತನ್ನ ಹೆಂಡತಿ, ಮಕ್ಕಳು ಮತ್ತು ತಂದೆ-ತಾಯಿಯನ್ನು ನಿರ್ಲಕ್ಷ್ಯ ಮಾಡಬಾರದು ಮತ್ತು ಸಂರಕ್ಷಿಸಲು ತಿರಸ್ಕರಿಸಿಬಾರದು". ಚರ್ಚಿಸಿ.

9. State the circumstances under which a person can be arrested without warrant and state the rights of the arrested person. **10**

ಯಾವ ಸಂದರ್ಭದಲ್ಲಿ ವಾರೆಂಟ್ ಇಲ್ಲದೆ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಎಂದು ತಿಳಿಸಿ ಮತ್ತು ದಸ್ತಗಿರಿಯಾದ ವ್ಯಕ್ತಿಯ ಹಕ್ಕುಗಳನ್ನು ತಿಳಿಸಿ.

10. Define murder. Distinguish between culpable homicide and murder. **10**

ಕೊಲೆಯನ್ನು ವ್ಯಾಖ್ಯಾನಿಸಿ. ಅಪರಾಧಿಕ ಮಾನವ ಹತ್ಯೆ ಮತ್ತು ಕೊಲೆಯ ಮಧ್ಯೆ ಇರುವ ವ್ಯತ್ಯಾಸವನ್ನು ವಿವರಿಸಿ.

11. When the right of private defence of the body extends to causing death? **10**

ಯಾವಾಗ ದೇಹದ ಖಾಸಗೀ ಪ್ರತಿರಕ್ಷೆಯ ಅಧಿಕಾರವು ಮರಣವನ್ನು ಉಂಟು ಮಾಡುವವರೆಗೆ ವ್ಯಾಪಿಸುತ್ತದೆ?



Teachingninja.in

**12.** A young man of 26 years is in love with a girl. But she does not respond to the same. Angered by the same, the young man in order to teach her a lesson, procures sulphuric acid and throws it on her face, causing severe acid burn injuries including loss of both eyesight and permanent disfiguration of face and hands. What is the offence committed? Explain. **10**

ಒಬ್ಬ 26 ವರ್ಷ ವಯಸ್ಸಿನ ಯುವಕ ಒಬ್ಬ ಹುಡುಗಿಯ ಪ್ರೀತಿಯಲ್ಲಿ ಇರುತ್ತಾನೆ. ಆದರೆ ಆಕೆ ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ. ಇದರಿಂದ ಕೋಪಗೊಂಡು ಸಲ್ಫ್ಯೂರಿಕ್ ಆಸಿಡ್ ತರಿಸಿ ಆಕೆಯ ಮುಖಕ್ಕೆ ಎಸೆಯುತ್ತಾನೆ. ಇದರಿಂದ ಆಕೆಗೆ ತೀವ್ರವಾದ ಆಸಿಡ್‌ನಿಂದ ಸುಟ್ಟ ಗಾಯಗಳಾಗುತ್ತವೆ ಮತ್ತು ಎರಡು ಕಣ್ಣುಗಳ ದೃಷ್ಟಿಯನ್ನು ಕಳೆದುಕೊಳ್ಳುತ್ತಾಳೆ ಮತ್ತು ಮುಖ ಮತ್ತು ಕೈ ಶಾಶ್ವತವಾಗಿ ವಿಕಾರಗೊಳ್ಳುತ್ತದೆ. ಆತ ಯಾವ ಅಪರಾಧ ಮಾಡಿದ್ದಾನೆ? ವಿವರಿಸಿ.



Teachingninja.in